# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1068 |
| ಸದಸ್ಯರ ಹೆಸರು | ಶ್ರೀ ಕೆ.ಅಬ್ದುಲ್ ಜಬ್ಬರ್. |
| ಉತ್ತರಿಸುವ ದಿನಾಂಕ | 20.08.2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

********

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಮುಜರಾಯಿ ಇಲಾಖೆ ಅಧೀನದಲ್ಲಿ ಬರುವ ಒಟ್ಟು ಕರ್ನಾಟಕ ಭವನಗಳ ಸಂಖ್ಯೆ ಎಷ್ಟು; ಸದರಿ ಭವನಗಳು ಯಾವುವು; (ರಾಜ್ಯವಾರು ಮಾಹಿತಿ ಒದಗಿಸುವುದು) | ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಹೊರ ರಾಜ್ಯಗಳ ಈ ಕೆಳಕಂಡ 07 ಧಾರ್ಮಿಕ ಸ್ಥಳಗಳಲ್ಲಿ ಕರ್ನಾಟಕ ರಾಜ್ಯ ಛತ್ರಗಳು/ಕರ್ನಾಟಕ ಭವನಗಳು ಇರುತ್ತವೆ. ವಿವರ ಈ ಕೆಳಕಂಡಂತಿದೆ:-<br><br>ಕ್ರ.ಸಂ. \| ರಾಜ್ಯ \| ಶ್ರೀಕ್ಷೇತ್ರ<br>(1) \| ಆಂಧ್ರಪ್ರದೇಶ \| ತಿರುಮಲ, ತಿರುಚಾನೂರು, ಮಂತ್ರಾಲಯ, ಶ್ರೀಶೈಲಂ<br>(2) \| ಮಹಾರಾಷ್ಟ್ರ \| ತುಳಜಾಪುರ, ಗುಡ್ಡಾಪುರ<br>(3) \| ಉತ್ತರಪ್ರದೇಶ \| ವಾರಣಾಸಿ |
| (ಆ) | ಸದರಿ ಕರ್ನಾಟಕ ಭವನದಲ್ಲಿ ಯಾರು ಯಾರಿಗೆ ಕೊಠಡಿಗಳನ್ನು ನೀಡಲಾಗುತ್ತಿದೆ; ಕೊಠಡಿಗಳನ್ನು ನೀಡಲು ಇರುವ ಮಾನದಂಡಗಳು ಯಾವುವು; | ಹೊರ ರಾಜ್ಯಗಳಲ್ಲಿರುವ ತಿರುಮಲ ಮತ್ತು ವಾರಣಾಸಿಯಲ್ಲಿರುವ ಕರ್ನಾಟಕ ರಾಜ್ಯ ಛತ್ರಗಳ ಕೊಠಡಿಗಳನ್ನು ಯಾತ್ರಾರ್ಥಿಗಳು ಮುಂಗಡವಾಗಿ ಆನ್‌ಲೈನ್ karnatakatemplesaccommodattion.com website ಮೂಲಕ ಕಾಯ್ದಿರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ತಿರುಮಲದ ಕರ್ನಾಟಕ ರಾಜ್ಯ ಛತ್ರದ ಐಹೊಳೆ ಬ್ಲಾಕ್ ನಲ್ಲಿರುವ 132 ಕೊಠಡಿಗಳ ಪೈಕಿ 90 ಕೊಠಡಿಗಳನ್ನು ಮತ್ತು ಹಂಪಿ ಬ್ಲಾಕ್‌ನಲ್ಲಿ ಲಭ್ಯವಿರುವ ಒಟ್ಟು 110 ಕೊಠಡಿಗಳಲ್ಲಿ 71 ಕೊಠಡಿಗಳ(AC ಕೊಠಡಿಗಳು)ಪೈಕಿ 50 ಕೊಠಡಿಗಳನ್ನು ಮತ್ತು 39 ಕೊಠಡಿಗಳ(AC Suits)ಪೈಕಿ 15 ಕೊಠಡಿಗಳನ್ನು ಭಕ್ತಾದಿಗಳಿಗೆ ಮುಂಗಡವಾಗಿ ಆನ್ ಲೈನ್ ಮೂಲಕ ಕಾಯ್ದಿರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>ವಾರಣಾಸಿ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಶ್ರೀ ಹರೀಶ್ಚಂದ್ರ ಘಾಟ್ (ಸ್ಮಶಾನ) ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಕರ್ನಾಟ ರಾಜ್ಯ ಛತ್ರದ ತಡೆಗೋಡೆಗೆ ಹಾನಿಯಾಗಿ ಸಂಪೂರ್ಣವಾಗಿ ಕುಸಿದು ಹೋಗಿರುತ್ತದೆ. ಅಲ್ಲದೇ ಸುಮಾರು ಒಂದು ಶತಮಾನಗಳಷ್ಟು ಹಳೆಯದಾದ (96 ವರ್ಷಗಳು) ಛತ್ರದ ಕಟ್ಟಡದ ಒಂದು ಭಾಗವು ಸಹ ಕುಸಿದು ಹೋಗಿರುತ್ತದೆ. ಈ ಬಗ್ಗೆ ಲೋಕೋಪಯೋಗಿ ಇಲಾಖೆಯವರು ಪರಿಶೀಲಿಸಿ, ಸಂಪೂರ್ಣ ಛತ್ರದ ಕಟ್ಟಡವನ್ನು ತೆರವುಗೊಳಿಸಿ, ಹೊಸದಾಗಿ ನಿರ್ಮಾಣ ಮಾಡಬೇಕಾಗಿರುತ್ತದೆ ಎಂದು ವರದಿ ನೀಡಿರುತ್ತಾರೆ. ಆದ್ದರಿಂದ, ಸದರಿ ಛತ್ರದ ಕೊಠಡಿಗಳ ಕಾಯ್ದಿರಿಸುವಿಕೆಯನ್ನು ಸ್ಥಗಿತಗೊಳಿಸಿದೆ.<br><br>ಉಳಿದಂತೆ, ಹೊರ ರಾಜ್ಯಗಳಲ್ಲಿರುವ ಕರ್ನಾಟಕ ಛತ್ರ/ಭವನಗಳಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳ/ಸಚಿವರುಗಳ/ಶಾಸಕರುಗಳ ಮತ್ತು ಇತರೆ ಉನ್ನತ ಮಟ್ಟದ ಅಧಿಕಾರಿಗಳ ಕಛೇರಿಗಳಿಂದ ನೀಡುವ ಶಿಫಾರಸ್ಸು ಪತ್ರಗಳಿಗೆ ಆದ್ಯತೆಯನ್ನು ನೀಡಿ, ಕೊಠಡಿಗಳ ಲಭ್ಯತೆಗನುಗುಣವಾಗಿ ಹಂಚಿಕೆ ಮಾಡಲಾಗುತ್ತಿರುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಇ) | ಈ ಕರ್ನಾಟಕ ಭವನಗಳನ್ನು ನಿರ್ವಹಣೆ ಮಾಡುತ್ತಿರುವವರು ಯಾರು; ಸದರಿ ಕರ್ನಾಟಕ ಭವನಗಳ ಸಮರ್ಪಕ ನಿರ್ವಹಣೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೊರ ರಾಜ್ಯದಲ್ಲಿರುವ ಕರ್ನಾಟಕ ರಾಜ್ಯ ಛತ್ರ/ಕರ್ನಾಟಕ ಭವನಗಳು ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದು, ಸದರಿ ಕರ್ನಾಟಕ ರಾಜ್ಯ ಛತ್ರ/ಕರ್ನಾಟಕ ಭವನಗಳ ದೈನಂದಿನ ನಿರ್ವಹಣೆಯನ್ನು ಇಲಾಖಾ ವತಿಯಿಂದ ನಿರ್ವಹಿಸಲಾಗುತ್ತಿದೆ.<br><br>**ಆಂಧ್ರಪ್ರದೇಶ ತಿರುಮಲ ಕರ್ನಾಟಕ ರಾಜ್ಯ ಛತ್ರ**: ಆಂಧ್ರಪ್ರದೇಶ, ತಿರುಮಲದ ಕರ್ನಾಟಕ ರಾಜ್ಯ ಛತ್ರದ ಹಳೇಬೀಡು, ಹಂಪಿ ಮತ್ತು ಐಹೊಳೆ ಬ್ಲಾಕ್ ಕಟ್ಟಡ ಹಾಗೂ ಕೊಠಡಿಗಳ ಸ್ವಚ್ಛತೆಯನ್ನು ನಿರ್ವಹಿಸುವ ಸಲುವಾಗಿ House Keeping ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಇ-ಟೆಂಡರ್ ಮೂಲಕ ಆಯ್ಕೆಯಾದ M/s Xeon Systems, Bengaluru ಸಂಸ್ಥೆಯವರಿಗೆ ವಹಿಸಲಾದ್ದು, ಸದರಿ ಸಂಸ್ಥೆಯವರು ಸರಿಯಾಗಿ ಸ್ವಚ್ಛತಾ ನಿರ್ವಹಣೆಯನ್ನು ನಿರ್ವಹಿಸುತ್ತಿದ್ದಾರೆ.<br><br>**ಆಂಧ್ರಪ್ರದೇಶ ಶ್ರೀಶೈಲಂ ಕರ್ನಾಟಕ ರಾಜ್ಯ ಛತ್ರ** :<br><br>ಶ್ರೀಶೈಲಂನಲ್ಲಿ ರೂ.85.00 ಕೋಟಿಗಳ ವೆಚ್ಚದಲ್ಲಿ ನೂತನ ವಸತಿ ಸಂಕೀರ್ಣವನ್ನು ನಿರ್ಮಿಸಲು 2022-23ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದ್ದು, ಈ ಉದ್ದೇಶಕ್ಕಾಗಿ ಪ್ರಥಮ ಹಂತದಲ್ಲಿ ರೂ.45.00 ಕೋಟಿಗಳನ್ನು ಮಂಜೂರು ಮಾಡಿದ್ದು, ಈವರೆಗೆ ರೂ.33.75 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ.ಲೋಇ 125 ಬಿಎಂಎಸ್ 2022 ದಿನಾಂಕ 25.08.2022 ರಲ್ಲಿ ಲೋಕೋಪಯೋಗಿ ಇಲಾಖಾವತಿಯಿಂದ ಆಂಧ್ರಪ್ರದೇಶದ ಶ್ರೀಶೈಲಂನಲ್ಲಿ ಯಾತ್ರಿ ನಿವಾಸ ಕಟ್ಟಡ ಕಾಮಗಾರಿಯ ರೂ.85.00 ಕೋಟಿಗಳ ವಿವರವಾದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br><br>ಆಂದ್ರಪ್ರದೇಶ ಸರ್ಕಾರದ ಧಾರ್ಮಿಕ ದತ್ತಿ ಆಯುಕ್ತರು, ಶ್ರೀಶೈಲಂನ ಕರ್ನಾಟಕ ರಾಜ್ಯ ಛತ್ರದ ಜಾಗದ ಪೈಕಿ 02 ಎಕರೆ 04 ಸೆಂಟ್ಸ್ ಜಾಗದ ಗುತ್ತಿಗೆ ಅವಧಿಯನ್ನು ದಿನಾಂಕ:01.07.1997 ರಿಂದ 30.06.2022 ರವರೆಗೆ ಹಾಗೂ ದಿನಾಂಕ:01.07.2022 ರಿಂದ ಮುಂದಿನ 11 ವರ್ಷಗಳ ಅವಧಿಗೆ ಹಾಲಿ ನೆಲ ಬಾಡಿಗೆಯನ್ನು ಪ್ರತಿ ಮೂರು ವರ್ಷಗಳಿಗೊಮ್ಮೆ ಶೇಕಡಾ 30 ರಷ್ಟು ಹೆಚ್ಚಿಸುವ ಹಾಗೂ ಛತ್ರದ ವಸೂಲಾತಿ ಮೊತ್ತದಲ್ಲಿ ಗರಿಷ್ಠ ಶೇಕಡಾ 25 ರಷ್ಟು ಪಾಲನ್ನು ದೇವಾಲಯದ ನಿಧಿಗೆ ಪಾವತಿಸುವಂತೆ ಷರತ್ತಿಗೊಳಪಟ್ಟು ನವೀಕರಿಸಲಾಗಿರುತ್ತದೆ. ಸದರಿ ಆದೇಶಕ್ಕೆ ಸಂಬಂಧಿಸಿದಂತೆ, ಜಾಗದ ಗುತ್ತಿಗೆ ಅವಧಿಯನ್ನು 50 ವರ್ಷಗಳಿಗೆ ನಿಗಧಿಪಡಿಸಿ ಪರಿಷ್ಕೃತ ಆದೇಶ ಹೊರಡಿಸುವಂತೆ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರು ಧಾರ್ಮಿಕ ದತ್ತಿ ಆಯುಕ್ತರು, ಆಂಧ್ರಪ್ರದೇಶ ಸರ್ಕಾರ ಇವರಿಗೆ ದಿನಾಂಕ:03.08.2024 ರಂದು ಪತ್ರ ಬರೆಯಲಾಗಿರುತ್ತದೆ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರು ದಿನಾಂಕ 05.01.2025 ರಂದು ಅ.ಸ ಪತ್ರ ಬರೆಯಲಾಗಿರುತ್ತದೆ.<br><br>ಶ್ರೀಶೈಲಂನ ಶ್ರೀ ಭ್ರಮರಾಂಭ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದಿಂದ ಗುತ್ತಿಗೆ ಪಡೆದಿರುವ ಜಾಗದ ಅವಧಿಯನ್ನು ನವೀಕರಿಸುವ ಕುರಿತು ಉಭಯ ರಾಜ್ಯಗಳ ಮಾನ್ಯ ಸಚಿವರು ಹಾಗೂ ಅಧಿಕಾರಿಗಳು ಸಭೆಯನ್ನು ನಡೆಸಿ ಚರ್ಚಿಸಿ ಜಾಗದ ಗುತ್ತಿಗೆ |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | | ಸಮಸ್ಯೆಯನ್ನು ಇತ್ಯರ್ಥಪಡಿಸಿದ ಬಳಿಕ ಉದ್ದೇಶಿತ ವಸತಿ ಸಂಕೀರ್ಣವನ್ನು ನಿರ್ಮಿಸಲು ಪರಿಶೀಲಿಸಲಾಗುತ್ತಿದೆ.<br>**ಆಂಧ್ರಪ್ರದೇಶ ಮಂತ್ರಾಲಯ ಕರ್ನಾಟಕ ರಾಜ್ಯ ಛತ್ರ:** ಮಂತ್ರಾಲಯ ಕರ್ನಾಟಕ ರಾಜ್ಯ ಛತ್ರದ ಹಳೆಯ ಮತ್ತು ಹೊಸ ಕಟ್ಟಡದ ಕೊಠಡಿಗಳನ್ನು ಅಗತ್ಯ ಸೌಲಭ್ಯಗಳೊಂದಿಗೆ ಅಭಿವೃದ್ಧಿ/ನವೀಕರಿಸುವ ಬಗ್ಗೆ ರೂ.11,30,74,349-00ಗಳ ಅಂದಾಜು ಪಟ್ಟಿಯನ್ನು ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯು ಪರಿಶೀಲನೆಯ ಹಂತದಲ್ಲಿರುತ್ತದೆ.<br><br>**ಉತ್ತರ ಪ್ರದೇಶ ವಾರಣಾಸಿ ಕರ್ನಾಟಕ ರಾಜ್ಯ ಛತ್ರ:**<br><br>2024-25ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-410 ರಲ್ಲಿನ ಘೋಷಣೆಯಂತೆ ವಾರಣಾಸಿಯಲ್ಲಿ ಕರ್ನಾಟಕ ರಾಜ್ಯ ಛತ್ರದ ಅಭಿವೃದ್ಧಿ ಕಾಮಗಾರಿಗಳನ್ನು ರೂ.5.00 ಕೋಟಿಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳುವ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ಕಂಇ 46 ಮುಅಬಿ 2024 ದಿನಾಂಕ: 21.03.2024ರಲ್ಲಿ ತಾತ್ವಿಕ ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ.<br><br>ಕರ್ನಾಟಕ ರಾಜ್ಯ ಛತ್ರದ ನಿರ್ವಹಣೆಯ ವೆಚ್ಚವನ್ನು ರಾಜ್ಯ ಛತ್ರದ ಆದಾಯದಿಂದ ಭರಿಸಲಾಗುತ್ತಿದೆ.<br><br>ಉತ್ತರ ಪ್ರದೇಶ ರಾಜ್ಯದ ವಾರಣಾಸಿಯಲ್ಲಿರುವ ಕರ್ನಾಟಕ ರಾಜ್ಯ ಸರ್ಕಾರಿ ವಸತಿ ಗೃಹವನ್ನು 1928 ರಲ್ಲಿ ಹಿಂದಿನ ಮೈಸೂರು ಮಹಾರಾಜರ ಅವಧಿಯಲ್ಲಿ ನಿರ್ಮಿಸಿರುತ್ತಾರೆ. ಸದರಿ ಕಟ್ಟಡಕ್ಕೆ 97 ವರ್ಷಗಳಾಗಿರುತ್ತದೆ. ಈ ಕಟ್ಟಡವು ಮೈಸೂರು ರಾಜ್ಯದ ಪರಂಪರೆ (Heritage Building) ಕಟ್ಟಡವಾಗಿರುತ್ತದೆ. ಅಂದಿನ ಮಹಾರಾಜರ ಮೈಸೂರು ಪ್ರಾಂತ್ಯದ ಸಾರ್ವಜನಿಕರು ವಾರಣಾಸಿಗೆ ಹೋದಾಗ ತಂಗಲು ಅನುಕೂಲವಾಗುವಂತೆ ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ಮಿಸಿದ್ದು, ಮೈಸೂರು ರಾಜ್ಯವು ಕರ್ನಾಟ ರಾಜ್ಯವಾಗಿದ್ದು ಪ್ರಸ್ತುತ ಈ ಕಟ್ಟಡವು ಕರ್ನಾಟಕ ರಾಜ್ಯ ಸರ್ಕಾರದ ಸ್ವತ್ತಾಗಿರುತ್ತದೆ. ಮುಜರಾಯಿ ಇಲಾಖೆಯು ಸ್ವಾಧೀನದಲ್ಲಿದ್ದು, ಮುಜರಾಯಿ ಇಲಾಖೆಯ ನಿರ್ವಹಣೆಯಲ್ಲಿರುತ್ತದೆ.<br><br>ಗಂಗಾ ನದಿಯ ಪ್ರವಾಹದಿಂದ ಕರ್ನಾಟಕ ರಾಜ್ಯ ಛತ್ರದ ವಸತಿ ಸಂಕೀರ್ಣದ ಉತ್ತರದಲ್ಲಿನ ಒಂದು ಭಾಗ ಹಾಗೂ ಹಳೆಯ ತಡೆ ಗೋಡೆಯು (Retaing Wall) ದಿಡೀರ್ ಕುಸಿದು ಬಿದ್ದಿರುತ್ತದೆ. ಇದರೊಂದಿಗೆ ರಾಜ್ಯ ಛತ್ರದ ಕಟ್ಟಡ ಭಾಗಶಃ ಭಾಗದ ಕುಸಿದಿರುತ್ತದೆ. ಈ ಹಿನ್ನಲೆಯಲ್ಲಿ ಬುಕ್ಕಿಂಗ್ ಸ್ಥಗಿತಗೊಂಡಿರುತ್ತದೆ.<br><br>ಈ ಹಿನ್ನಲೆಯಲ್ಲಿ, **ದಿನಾಂಕ:17.08.2024 ರಂದು ನಾನು ಖುದ್ದಾಗಿ ಇಲಾಖಾ ಅಧಿಕಾರಿಗಳೊಂದಿಗೆ ವಾರಣಾಸಿಗೆ ಭೇಟಿ ನೀಡಿ ಸ್ಥಳ ಪರಿವೀಕ್ಷಣೆ ನಡೆಸಿದ್ದು**, 1928ರಲ್ಲಿ ನಿರ್ಮಿಸಲಾಗಿರುವ ಸುಮಾರು 96 ವರ್ಷಗಳಷ್ಟು ಹಳೆಯದಾದ ಕರ್ನಾಟಕ ರಾಜ್ಯ ಛತ್ರವನ್ನು 2024-25ನೇ ಸಾಲಿನ ಮುಂಗಡ ಪತ್ರದಲ್ಲಿ ಘೋಷಿತವಾಗಿರುವ ರೂ.500.00 ಲಕ್ಷ ರೂ.ಗಳನ್ನು ಬಳಸಿಕೊಂಡು ಅಭಿವೃದ್ಧಿ / ನವೀಕರಿಸಲು ಕ್ರಮ ವಹಿಸುವಂತೆ ಸಂಬಂಧಪಟ್ಟವರಿಗೆ ಸೂಚಿಸಿರುತ್ತೇನೆ.<br><br>ಮುಂದುವರೆದು, ದಿನಾಂಕ:29.10.2024 ರಂದು ಮಾನ್ಯ ಧಾರ್ಮಿಕ ದತ್ತಿ ಹಾಗೂ ಸಾರಿಗೆ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಸಭೆಯಲ್ಲಿ ತಾಂತ್ರಿಕ ತಂಡವು ಕರ್ನಾಟಕ ರಾಜ್ಯ ಛತ್ರದ ಹಳೆಯ ಕಟ್ಟಡದ ಸಂಪೂರ್ಣ ಭಾಗ ಶಿಥಿಲಗೊಂಡಿದ್ದು, ಕಟ್ಟಡದ ಬಹುಭಾಗಗಳಲ್ಲಿ ಬಿರುಕು ಬಂದಿದ್ದು, ಸದರಿ ಕಟ್ಟಡವನ್ನು 1928 ರಲ್ಲಿ ನಿರ್ಮಿಸಲಾಗಿದ್ದು, ಸದರಿ ಕಟ್ಟಡವು ಸಾಮರ್ಥ್ಯ ಕಳೆದುಕೊಂಡಿರುವುದರಿಂದ ಕುಸಿದು ಬೀಳುವ ಸಾಧ್ಯತೆ ಇದ್ದು, ಸದರಿ ಸ್ಥಳದಲ್ಲಿ ಹೊಸ ಕಟ್ಟಡವನ್ನು ನಿರ್ಮಿಸುವುದು ಸೂಕ್ತವೆಂದು ಲೋಕೋಪಯೋಗಿ ಇಲಾಖೆಯವರು ಅಭಿಪ್ರಾಯ ಪಟ್ಟಿದ್ದು, ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ ಮಾನ್ಯ ಸಚಿವರು ಸೂಚಿಸಿರುವಂತೆ ವಾರಣಾಸಿಯಲ್ಲಿರುವ ಕರ್ನಾಟಕ ರಾಜ್ಯ ಅತಿಥಿ ಗೃಹದ ಬಿದ್ದು ಹೋಗಿರುವ ತಡೆಗೋಡೆ ಮತ್ತು ಹಳೆಯ ಕಟ್ಟಡವನ್ನು ತೆರವುಗೊಳಿಸಿ ಹೊಸದಾಗಿ ಅತಿಥಿ ಗೃಹ ನಿರ್ಮಿಸಲು ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಲಾಗಿರುತ್ತದೆ.<br><br>ಕಾರ್ಯಪಾಲಕ ಅಭಿಯಂತರರು, ನಂ.1 ಕಟ್ಟಡಗಳ ವಿಭಾಗ, ಬೆಂಗಳೂರು ರವರು Construction of Retaining wall up to Pile cap at Northen side of Guest House ಈ ಕಾಮಗಾರಿಗಾಗಿ ರೂ.998.00 ಲಕ್ಷಗಳ ಅಂದಾಜುಪಟ್ಟಿಯನ್ನು ಸಿದ್ಧಪಡಿಸಿ ದಿನಾಂಕ: 16.08.2025 ರಂದು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br><br>**ಮಹರಾಷ್ಟ್ರರಾಜ್ಯದ ತುಳಜಾಪುರ ಕರ್ನಾಟಕ ರಾಜ್ಯ ಛತ್ರ :**<br>ತುಳಜಾಪುರ ಕರ್ನಾಟಕ ರಾಜ್ಯ ಛತ್ರದ ಕಟ್ಟಡದ ಹಾಗೂ ಸುತ್ತಲಿನ ಕಾಂಪೌಂಡ್ ನವೀಕರಣಕ್ಕಾಗಿ ರೂ.178-34 ಲಕ್ಷಗಳ ಅಂದಾಜು ಪಟ್ಟಿಯನ್ನು ಮತ್ತು ಕರ್ನಾಟಕ ರಾಜ್ಯ ಛತ್ರದ ನಿರ್ಮಾಣ ಕಾಮಗಾರಿಗಾಗಿ ರೂ.300.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಅನುದಾನ ಬಿಡುಗಡೆ ಮಾಡಲು ಪರಿಶೀಲಿಸಲಾಗುತ್ತಿದೆ. |
| (ಈ) | ಈ ರೀತಿಯ ಅಸಮರ್ಪಕ ನಿರ್ವಹಣೆಯಿಂದಾಗಿ ಗಣ್ಯರು ಹಾಗೂ ಅಧಿಕಾರಿಗಳು ಸದರಿ ಕರ್ನಾಟಕ ಭವನಗಳಿಗೆ ತೆರಳದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೊರ ರಾಜ್ಯಗಳಲ್ಲಿರುವ ಕರ್ನಾಟಕ ಭವನ/ಕರ್ನಾಟಕ ರಾಜ್ಯ ಛತ್ರಗಳು ಅಸಮರ್ಪಕ ನಿರ್ವಹಣೆಯಿಂದಿರುವುದು ತಿಳಿದು ಬಂದಿರುವುದಿಲ್ಲ. ಹೊರ ರಾಜ್ಯಗಳ ಶ್ರೀಕ್ಷೇತ್ರ ತಿರುಮಲ, ಶ್ರೀಶೈಲಂ, ಮಂತ್ರಾಲಯ, ವಾರಣಾಸಿ ಮತ್ತು ತುಳಜಾಪುರದಲ್ಲಿರುವ ಕರ್ನಾಟಕ ರಾಜ್ಯ ಛತ್ರಗಳನ್ನು ಉತ್ತಮವಾಗಿ ಅಭಿವೃದ್ಧಿ/ನವೀಕರಣಗೊಳಿಸಿ ನಿರ್ವಹಿಸಲು ಕ್ರಮವಹಿಸಲಾಗುತ್ತಿದೆ. |
| (ಉ) | ಬಂದಿದ್ದಲ್ಲಿ. ಸದರಿ ಕರ್ನಾಟಕ ಭವನಗಳ ಸಮರ್ಪಕ ನಿರ್ವಹಣೆ ಮಾಡಿ. ಗುಣಮಟ್ಟದ ಸೌಕರ್ಯ ನೀಡಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ? (ಸಂಪೂರ್ಣ ಮಾಹಿತಿ ಒದಗಿಸುವುದು) | |

ಸಂಖ್ಯೆ: ಕಂಇ 186 ಮುಸಪ್ರ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು